# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :06 ಪ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ನೂತನ ಸಂದೇಶ್ ನಾಯಕ್ |
| ಗಂಡನ ಹೆಸರು | : | ಸಂದೇಶ್ ನಾಯಕ್ |
| ವಯಸ್ಸು | : | 29 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಬಾವಿಕೇರಿ, ಅಂಕೋಲ |

**ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-7 ನನ್ನ ಗಂಡನ ಅಣ್ಣ, ಚಾಸಾ-1 ಆತನ ಹೆಂಡತಿ. ಚಾಸಾ-4 ನನ್ನ ಅತ್ತೆ. ಚಾಸಾ-5 ನನ್ನ ಗಂಡ. ಚಾಸಾ-14 ರವರು ಚಾಸಾ-7 ರವರ ಮಗ. ನಾವು ಹಾಗೂ ಚಾಸಾ-7 ರವರು ಅಂಕೋಲಾದ ಬಾವಿಕೇರಿಯಲ್ಲಿ ಅಕ್ಕಪಕ್ಕದ ಮನೆಯಲ್ಲಿ ವಾಸ ಮಾಡುತ್ತೇವೆ. ನನ್ನ ಅತ್ತೆ ನಮ್ಮ ಮನೆಯಲ್ಲಿ ವಾಸವಾಗಿರುತ್ತಾರೆ. ಆರೋಪಿಯು ಚಾಸಾ-7 ರವರ ಸ್ನೇಹಿತ. ಚಾಸಾ-7 ರವರು ಕಾರವಾರದ ಸೀ ಬರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದು, ಅವರು ರಾತ್ರಿ ಪಾಳಿಯ ಕೆಲಸಕ್ಕೆ ಹೋದಾಗ, ನನ್ನ ಅತ್ತೆ ಚಾಸಾ-1 ರವರ ಮನೆಯಲ್ಲಿ ಮಲಗುತ್ತಿದ್ದರು. ಆರೋಪಿಯು ಚಾಸಾ-7 ರವರ ಸ್ನೇಹಿತನಾಗಿದ್ದರಿಂದ, ಆತ ಇದ್ದ ಸಮಯದಲ್ಲಿ ಆರೋಪಿ ಚಾಸಾ-7 ರವರ ಮನೆಗೆ ಬಂದು ಹೋಗುತ್ತಿದ್ದ. ದಿಃ 23-01-2017 ರಂದು ರಾತ್ರಿ 08.00 ಗಂಟೆಗೆ ಚಾಸಾ-7 ರವರು ರಾತ್ರಿ ಪಾಳಿಯ ಕೆಲಸಕ್ಕೆ ಹೋಗಿದ್ದು, ಆ ದಿನ ರಾತ್ರಿ ಊಟವಾದ ನಂತರ ನನ್ನ ಅತ್ತೆ 11.00 ಗಂಟೆ ಸುಮಾರಿಗೆ ಚಾಸಾ-7 ರವರ ಮನೆಗೆ ಹೋಗಿ ಮಲಗಿಕೊಂಡಿದ್ದರು. ದಿ.24-01-2017 ರಂದು ನಾವು ಮನೆಯ ಮಲಗಿದ್ದಾಗ, ಮಧ್ಯ ರಾತ್ರಿ 01.00 ಗಂಟೆ ಸಮಯದಲ್ಲಿ

ಚಾಸಾ–7 ಮನೆಯ ಹತ್ತಿರ ಬೊಬ್ಬೆಯಾಗುತ್ತಿರುವುದನ್ನು ಕೇಳಿ, ನಾನು ಮತ್ತು ನನ್ನ ಗಂಡ ಚಾಸಾ–5 ರವರು ಚಾಸಾ–7 ರವರು ಮನೆಯ ಹತ್ತಿರ ಹೋಗಿ ನೋಡಿದಾಗ, ನನ್ನ ಅತ್ತೆ ಹಾಗೂ ಚಾಸಾ–1 ರವರು ಮತ್ತು ಅವರ ಮಗ ಅಂಕುಶ ಚಾಸಾ–14 ರವರು ಮನೆಯ ಒಳಗೆ ಬೊಬ್ಬೆ ಹಾಕುತ್ತಿದ್ದರು ಹಾಗೂ ಗಾಬರಿಗೊಂಡಿದ್ದರು. ಆ ಸಮಯದಲ್ಲಿ ನಮ್ಮ ಅಕ್ಕಪಕ್ಕದ ಮನೆಯವರಾದ ಚಾಸಾ–8 ರಿಂದ 13 ರವರೂ ಸಹ ಅಲ್ಲಿಗೆ ಬಂದಿದ್ದು, ಆಗ ನಾವು ಚಾಸಾ–1 ರವರನ್ನು ಏನಾಯಿತು ಎಂದು ವಿಚಾರಿಸಿದಾಗ "ಈ ದಿನ ರಾತ್ರಿ ಚಾಸಾ–4 ರವರು ಮನೆಯ ಹಾಲ್ ನಲ್ಲಿ ಮಲಗಿದ್ದು, ನಾನು ಹಾಗೂ ನನ್ನ ಮಗ ಚಾಸಾ–14 ಮನೆಯ ಬೆಡ್ ರೂಮಿನಲ್ಲಿ ಮಲಗಿದ್ದೆವು, ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ, ಮನೆಯ ಹಿಂದಿನ ಬಾಗಿಲನ್ನು ಯಾರೋ ಬಡಿಯುತ್ತಿದ್ದನ್ನು ಕೇಳಿ, ನಾವು ಎಚ್ಚರಗೊಂಡು ಬಾಗಿಲು ತೆಗೆದು ನೋಡಿದಾಗ, ಬಾಗಿಲು ಬಡಿದ ವ್ಯಕ್ತಿ ನನ್ನ ಗಂಡನ ಸ್ನೇಹಿತನಾದ ನಾರಾಯಣ ರಾಮಚಂದ್ರ ನಾಯಕ ಆಗಿದ್ದು, ಆತನಿಗೆ ನಾನು 'ನೀನು ಇಷ್ಟು ರಾತ್ರಿಯಲ್ಲಿ ಏಕೆ ನಮ್ಮ ಮನೆಗೆ ಬಂದೆ' ಎಂದು ಕೇಳಿದಾಗ, ಆತ ಒಮ್ಮೆಲೇ ನಮ್ಮ ಮನೆಯ ಒಳಗೆ ನುಗ್ಗಿ ಬಂದು, ನನ್ನನ್ನು ಅಪ್ಪಿಕೊಂಡು, ರೂಮಿನ ಒಳಗೆ ಎಳೆದುಕೊಂಡ ಹೋಗಿ, ರೂಮಿನ ಬಾಗಿಲನ್ನು ಹಾಕಿಕೊಂಡು, 'ನೀನು ನನಗೆ ಬೇಕೆ ಬೇಕು, ನೀನಾಗೆ ಒಪ್ಪಿದರೆ ಸರಿ, ಇಲ್ಲದಿದ್ದರೆ ನಾನು ನಿನ್ನನ್ನು ಬಲಾತ್ಕರಿಸಿಯಾದರೂ ಪಡೆಯದೆ ಬಿಡುವುದಿಲ್ಲ', ಅಂತ ಹೇಳಿ, ನಾನು ಹಾಕಿಕೊಂಡಿದ್ದ ಚೂಡಿದಾರವನ್ನು ಎಳೆಯಲು ಪ್ರಯತ್ನಿಸಿದ ಹಾಗೂ ಚೂಡಿದಾರದ ಒಳಗೆ ಕೈ ಹಾಕಿ, ನಾನು ಹಾಕಿದ ಚಡ್ಡಿಯನ್ನು ಎಳೆಯಲು ನೋಡಿದನು, ಆಗ ನಾನು ಬೊಬ್ಬೆ ಹಾಕಿಕೊಂಡು, ಆತನಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದು, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡು ಓಡುತ್ತಿದ್ದಾಗ, ಆರೋಪಿಯು ನನ್ನನ್ನು ಹಿಡಿಯಲು ಹಿಂದಿನಿಂದ ಓಡಿ ಬಂದಿದ್ದು, ನಾನು ಬಾಗಿಲು ಹಾಕಿಕೊಳ್ಳದಂತೆ ಹಿಡಿದುಕೊಂಡಿದ್ದು, ಆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಆರೋಪಿಯ ತಲೆಗೆ ತಾಗಿ, ರಕ್ತ ಬಂದಿರುತ್ತದೆ, ನಂತರ ತಕ್ಷಣ ನಾನು ಆರೋಪಿಯಿಂದ ತಪ್ಪಿಸಿಕೊಂಡು, ಆತನಿಗೆ ಒಳಗೆ ದೂಡಿ, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡೆನು ಹಾಗೂ ನನ್ನ ಅತ್ತೆ ಮನೆಯ ಮುಂದಿನ ಬಾಗಿಲನ್ನು ಹಾಕಿಕೊಂಡರು, ಆ ಸಮಯದಲ್ಲಿ ನನ್ನ ಮಗನೂ ಸಹ ಕೂಗಿಕೊಳ್ಳುತ್ತಾ ಓಡಿ ಬಂದನು. ನಾವು ಕೂಗಾಡುವ ಶಬ್ಧ ಕೇಳಿ ಅಕ್ಕಪಕ್ಕದವರು ಹಾಗೂ ಕೇರಿಯ ಜನರು ಬಂದಿದ್ದು, ನಾವು ಅವರಿಗೆ ವಿಷಯ ತಿಳಿಸಿದೆವು" ಎಂದು ಹೇಳಿರುತ್ತಾರೆ. ನಂತರ ನಾವು ಹಾಗೂ ಕೇರಿಯ ಜನರೆಲ್ಲರೂ ಸೇರಿ ಮನೆಯ ಒಳಗೆ ಕೂಡಿ ಹಾಕಿದ್ದ ಆರೋಪಿಯನ್ನು ಹಿಡಿದು

ಹೊರಗೆ ಕರೆದುಕೊಂಡು ಬಂದೆವು. ನಂತರ ಬೆಳಿಗ್ಗೆ ಚಾಸಾ-7 ರವರು ಕೆಲಸದಿಂದ ಬಂದ ನಂತರ ನಾವು ಆತನಿಗೆ ವಿಷಯ ತಿಳಿಸಿ, ಚಾಸಾ-1 ರವರ ಮೂಲಕ ಆರೋಪಿತನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ನಾನು ಈ ವಿಷಯದ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾವು ಆರೋಪಿಯನ್ನು ಹಿಡಿದುಕೊಂಡಾಗ ಆತನ ಬಳಿ ಇದ್ದ ವಿವೋ ಕಂಪನಿಯ ಮೊಬೈಲ್ ಕೆಳಗೆ ಬಿದ್ದಿದ್ದು, ನನ್ನ ಅತ್ತೆ ಸದರಿ ಮೊಬೈಲನ್ನು ಎತ್ತಿಟ್ಟುಕೊಂಡು ಪೊಲೀಸರು ಬಂದಾಗ ಅದನ್ನು ನೀಡಿರುತ್ತಾರೆ. ಸದರಿ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ.1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ